**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/06/ಇಸಿಎಸ್(3)/2017

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 16.09.2017.

**ಜ್ಞಾಪನ**

ವಿಷಯ : ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ನಡೆಸಲಾಗುವ ಡಿಪ್ಲೊಮಾ ಇನ್ ಸಿವಿಲ್ ಇಂಜಿನಿಯರಿಂಗ್ (ಜನರಲ್) ಹಾಗೂ ಡಿಪ್ಲೊಮಾ ಇನ್ ಸಿವಿಲ್ ಇಂಜಿನಿಯರಿಂಗ್ (ಡ್ರಾಫ್ಟ್‌ಮೆನ್‌ಶಿಪ್) ಕೋರ್ಸ್‌ಗಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ತುಲನಾತ್ಮಕ ವರದಿಯನ್ನು ನೀಡುವ ಬಗ್ಗೆ.

ಉಲ್ಲೇಖ : 1. ಡಿ.ವಿ.ಪಿ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಡಿಟಿಇ 14 ಡಿವಿಪಿ(2) 2016.
2. ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/01/ಇಸಿಎಸ್(2)/2016, ದಿನಾಂಕ: 07.04.2017.

*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಅನಧಿಕೃತ ಟಿಪ್ಪಣಿಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 2018-19 ನೇ ಸಾಲಿನಿಂದ ಸಿವಿಲ್ ಡ್ರಾಫ್ಟ್‌ಮೆನ್‌ಶಿಪ್ ಕೋರ್ಸ್‌ನ್ನು ಸಿವಿಲ್ ಇಂಜಿನಿಯರಿಂಗ್ ಜನರಲ್ ವಿಭಾಗದಲ್ಲಿ ವಿಲೀನಗೊಳಿಸುವಂತೆ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು ಈ ಸಂಸ್ಥೆಯ ಪ್ರಾಚಾರ್ಯರು ಕೋರಿರುವುದರ ಮೇರೆಗೆ ಈ ಸಂಬಂಧ ವಿಷಯ ಪರಿಣತಿ ತಜ್ಞರಿಂದ ಅಭಿಪ್ರಾಯವನ್ನು ಪಡೆದು ವರದಿ ನೀಡುವಂತೆ ತಿಳಿಸಲಾಗಿದೆ.

ಉಲ್ಲೇಖ (2) ರ ಜ್ಞಾಪನದಲ್ಲಿ ಜಲಸಂಪನ್ಮೂಲ ಇಲಾಖೆಗೆ ಸಹಾಯಕ/ಕಿರಿಯ ಇಂಜಿನಿಯರ್ (ಸಿವಿಲ್/ಮೆಕ್ಯಾನಿಕಲ್) ಹುದ್ದೆಗಳ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ತಾಂತ್ರಿಕ ಪರೀಕ್ಷಾ ಮಂಡಳಿಯು ನಿಗದಿಪಡಿಸಿರುವ ತತ್ಸಮಾನ ವಿದ್ಯಾರ್ಹತೆಗೆ ಸಂಬಂಧಪಟ್ಟಂತೆ ಪರಿಶೀಲಿಸಿ ವರದಿಯನ್ನು ನೀಡಲು ಸಮಿತಿಯನ್ನು ರಚಿಸಲಾಗಿತ್ತು ಹಾಗೂ ಸಮಿತಿಯಿಂದ ಈ ಬಗ್ಗೆ ವರದಿಯನ್ನು ಪಡೆಯಲಾಗಿತ್ತು.

ಪ್ರಸ್ತುತ ಡಿಪ್ಲೊಮಾ ಇನ್ ಸಿವಿಲ್ ಇಂಜಿನಿಯರಿಂಗ್ ಹಾಗೂ ಡಿಪ್ಲೊಮಾ ಇನ್ ಸಿವಿಲ್ ಇಂಜಿನಿಯರಿಂಗ್ (ಡ್ರಾಫ್ಟ್‌ಮೆನ್‌ಶಿಪ್) ಕೋರ್ಸ್‌ಗಳ ಸಿ-15 ಪಠ್ಯಕ್ರಮವನ್ನು ಪರಿಶೀಲಿಸಿ ತುಲನಾತ್ಮಕ ವರದಿ ನೀಡಲು ಈ ಕೆಳಕಂಡ ಉಪನ್ಯಾಸಕರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ.

| **ಸಿವಿಲ್ ಇಂಜಿನಿಯರಿಂಗ್ ವಿಭಾಗ** | | | |
|---|---|---|---|
| ಕ್ರ.ಸಂ | ಹೆಸರು ಮತ್ತು ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ | ಅಧ್ಯಕ್ಷರು/ಸದಸ್ಯರು |
| 1. | ಶ್ರೀ ಪಿ.ಚಂದ್ರಮೋಹನ್, ಆ ಶ್ರೇ ಉ | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು- ಸಿಡಿ | ಅಧ್ಯಕ್ಷರು |
| 2. | ಶ್ರೀ ಸದಾಶಿವ ಆರಾಧ್ಯ, ಆ ಶ್ರೇ ಉ | **ಎಸ್.ಜೆ(ಸರ್ಕಾರಿ) ಪಾಲಿಟೆಕ್ನಿಕ್, ಬೆಂಗಳೂರು-ಸಿಇ** | ಸದಸ್ಯರು |
| 3. | ಡಾ॥ ಚಂದ್ರಶೇಖರ್.ಹೆಚ್, ಆ ಶ್ರೇ ಉ | ಎಂ.ಇ.ಐ ಪಾಲಿಟೆಕ್ನಿಕ್, ಬೆಂಗಳೂರು-ಸಿಇ | ಸದಸ್ಯರು |

ಮೇಲ್ಕಂಡ ಸಮಿತಿಯ ಅಧ್ಯಕ್ಷರು/ಸದಸ್ಯರು **ದಿನಾಂಕ: 21.09.2017** ರಂದು **ಬೆಳಗ್ಗೆ 11.00** ಗಂಟೆಗೆ ತಾಂತ್ರಿಕ ಪರೀಕ್ಷಾ ಮಂಡಳಿಯ ಕೊಠಡಿ ಸಂಖ್ಯೆ: 501 ರಲ್ಲಿ ಸಭೆ ಸೇರಿ ಸಿ-15 ಪಠ್ಯಕ್ರಮಗಳನ್ನು ವಿವರವಾಗಿ ಪರಿಶೀಲಿಸಿ ತತ್ಸಮಾನತೆ ಬಗ್ಗೆ ಸ್ಪಷ್ಟ ವರದಿ ನೀಡಲು ತಿಳಿಸಲಾಗಿದೆ.

ಸಭೆಗೆ ತಮ್ಮ ವಿಭಾಗದ ಸಿ-15 ಪಠ್ಯ ಕ್ರಮದೊಂದಿಗೆ ಹಾಜರಾಗಲು ಸಮಿತಿಯ ಅಧ್ಯಕ್ಷರು/ಸದಸ್ಯರಿಗೆ **ತಿಳಿಸಲಾಗಿದೆ.**

ಕಾರ್ಯದರ್ಶಿ

ಇವರಿಗೆ: ಸಂಬಂಧಿಸಿದ ಆಯ್ಕೆ ಶ್ರೇಣಿ ಉಪನ್ಯಾಸಕರಿಗೆ-ಮುಂದಿನ ಕ್ರಮಕ್ಕಾಗಿ

ಪ್ರತಿ: 1. ಇ-ಆಡಳಿತ-ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಸಂಬಂಧಪಟ್ಟ ಸಂಸ್ಥೆಗಳ ಪ್ರಾಚಾರ್ಯರಿಗೆ-ಮಾಹಿತಿಗಾಗಿ
3. ಜಂಟಿ ನಿರ್ದೇಶಕರು, ಎ.ಟಿ.ಎಸ್, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು – ಮಾಹಿತಿಗಾಗಿ